**ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ಆಳಂದ**

**ಸಿ.ಸಿ. ನಂ. 2553/2024**

**ಆರೋಪಿತನ ಹೆಸರು**

1. ಶಾಂತಪ್ಪ ತಂದೆ ಶಿವಶರಣಪ್ಪ ಕಟ್ಟಿಮನಿ,
ವಃ 41 ವರ್ಷ, ಉಃ ಕೆ.ಎಸ್.ಆರ್.ಟಿ.ಸಿ. ಬಸ ಚಾಲಕ,
ಸಾಃ ಲಾಚಿಂಚೋಳಿ.

2. ಸಂಜು @ ಸಂಜುಕುಮಾರ ತಂದೆ ಶಿವಶರಣಪ್ಪ ಕಟ್ಟಿಮನಿ,
ವಃ 32 ವರ್ಷ, ಉಃ ಒಕ್ಕಲುತನ,
ಸಾಃ ಲಾಡಚಿಂಚೋಳಿ.

ಡಿ. ಹಣಮಂತರಾಯ ತಂದೆ ಶಿವಶರಣಪ್ಪ ಕಟ್ಟಿಮನಿ,
ವಃ 39 ವರ್ಷ, ಉಃ ಒಕ್ಕಲುತನ,
ಸಾಃ ಲಾಡಚಿಂಚೋಳಿ.

**ಃ ಆ ವಾ ದ ನೆ ಃ**

ನರೋಣಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಲಾಡ ಚಿಂಚೋಳಿ ಗ್ರಾಮದಲ್ಲಿ, ಎರಡು ವರ್ಷಗಳ ಹಿಂದೆ 1ನೇ ಆರೋಪಿತನಾದ ನಿಮ್ಮ ಜೋತೆ ಸಾಕ್ಷಿ ನಂ.1 ರ ಮದುವೆ ಅಗಿರುತ್ತದೆ, ಮದುವೆ ಸಮಯದಲ್ಲಿ 15 ಗ್ರಾಂ ಬಂಗಾರದ ಆಭರಣಗಳು ಮತ್ತು ಗೃಹ ಬಳಕೆಯ ಸಾಮಾನುಗಳು, ಬಟ್ಟೆ, ಬರೆ ಹೀಗೆ ಒಟ್ಟು ಮೂರು ಲಕ್ಷ ರೂಪಾಯಿಗಳು ಖರ್ಚು ಮಾಡಿ ಅದ್ದೂರಿಯಾಗಿ ಲಗ್ನ ಮಾಡಿದ್ದು, ಮದುವೆ ಆದ ನಂತರ 1ನೇ ಆರೋಪಿತನಾದ ನೀವು ಸಾಕ್ಷಿ ನಂ.1 ರವರ ಜೋತೆ ಒಂದು ವರ್ಷ ಅನೊನ್ನವಾಗಿದ್ದು, ಸಾಕ್ಷಿ ನಂ.1 ರವರು ಗರ್ಭಿಣಿ ಆದ ಸಮಯದಲ್ಲಿ, 1, 2, 3 ಆರೋಪಿತರಾದ ನೀವು ಸಾಕ್ಷಿ ನಂ.1ರವರ ಸುಳ್ಳು ಆರೋಪ ಮಾಡಿ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಡುತ್ತಾ ಹೊಡೆ ಬಡೆ ಮಾಡಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ

498(A) ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಎರಡನೇಯದಾಗಿ ದಿನಾಂಕ 13.10.2023 ರಂದು 7.30 ಗಂಟೆ ಸುಮಾರಿಗೆ ನರೋಣಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಲಾಡ ಚಿಂಚೋಳಿ ಗ್ರಾಮದ ಸಾಕ್ಷಿ ನಂ.1 ರವರು ಮನೆಯಲ್ಲಿರುವಾಗ  1, 2, 3 ಆರೋಪಿತರಾದ ನೀವು ಸಾಕ್ಷಿ ನಂ.1 ರವರ ಜೋತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 504 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಮೂರನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ 1ನೇ ಆರೋಪಿತನಾದ ನೀವು ಸಾಕ್ಷಿ ನಂ.1 ರವರ ಬಾಯಿಯಲ್ಲಿ ಅರಬಿ ತುರುಕಿ ಕಟ್ಟಿಗೆಯಿಂದ ಬೆನ್ನ ಮೇಲೆ, ಕಾಲ ಮೇಲೆ ಹೊಡೆ ಬಡೆ ಮಾಡಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 324 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ನಾಲ್ಕನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2 ಮತ್ತು 3ನೇ ಆರೋಪಿತರಾದ ನೀವು ಕೈಗಳಿಂದ ಸಾಕ್ಷಿ ನಂ.1 ರವರಿಗೆ ಹೊಡೆ ಬಡೆ ಮಾಡಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 323 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಕೊನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, ಆರೋಪಿತರಾದ ನೀವು ಸಾಕ್ಷಿ ನಂ.1 ರವರಿಗೆ ಜೀವ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 506 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಪ್ರಶ್ನೆ ಃ ಈ ಮೇಲೆ ಒದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ ಅ-1 ಃ

ಅ-2 ಃ

ಅ-3 ಃ

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ ಅ-1 ಃ

ಅ-2 ಃ

ಅ-3 ಃ

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ ಎಫ್ ಸಿ**
**ನ್ಯಾಯಾಲಯ, ಆಳಂದ.**